ಈ ದಿನ ದಿಃ 04-07-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.2 ಪರ ಶ್ರೀ ಆರ್ ಡಿ ಪಿ ವಕೀಲರಿಂದಃ

3. ನಾನು ಒಕ್ಕಲುತನ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುವದಿಲ್ಲ. ನಾವು 04 ಜನ ಅಣ್ಣತಮ್ಮಂದಿರು. ಶಂಕರ ನನ್ನ ಅಣ್ಣ. ನನ್ನ ಅಣ್ಣ ಜಮೀನನ್ನು ಖರೀದಿಸಿರುತ್ತಾರೆ ಎನ್ನುವದು ಗೊತ್ತು ಆದರೆ ಇಸ್ವೀ ನೆನಪಿಲ್ಲ. ಅದನ್ನು ಎಷ್ಟು ಹಣಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ಆ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಆ ಖರೀದಿ ಪತ್ರದಲ್ಲಿ ಬರೆದಿರುವ ಚಕಬಂದಿ ಬಗ್ಗೆ ನನಗೆ ಮಾಹಿತಿ ಇದೆ. ಅದರಲ್ಲಿ ನಮೂದು ಇರುವ ಚಕಬಂದಿ ಪೂರ್ವಕ್ಕೆ ಮಾರುತಿ ಬಸಪ್ಪ ಈಟಿ ಇವರ ಜಮೀನು, ಪಶ್ಚಿಮಕ್ಕೆ ಮಲ್ಲಪ್ಪ ರವರ ಜಮೀನು. ದಕ್ಷಿಣಕ್ಕೆ ಶಂಕರ ಶಿವಲಿಂಗ ಈಟಿ ಇವರ ಹೊಲ, ಉತ್ತರಕ್ಕೆ ಯಾರು ಇದ್ದಾರೆ ಎಂದು ನೆನಪಿಲ್ಲ. ಮಹಾದೇವ ಈಟಿ ಎಂದರೆ ನನ್ನ ಅಣ್ಣ. ಅವರು ಜಮೀನನ್ನು ಯಾವ ರೀತಿ ತೆಗೆದುಕೊಂಡಿರುತ್ತಾರೆಂದು ನನಗೆ ಮಾಹಿತಿ ಇಲ್ಲ.

4. ಮೂಲ ಸರ್ವೆ ನಂಬರ 172/1 ನ್ನು ಯಾವಾಗ ಪೋಡಿ ಮಾಡಿಕೊಂಡಿದ್ದಿರಿ ಎಂದರೆ ಇಸ್ವೀ ನೆನಪಿಲ್ಲ. ಖರೀದಿ ಪತ್ರ ಮಾಡುವ ಪೂರ್ವದಲ್ಲಿ ಹಳೆ ಉತಾರ ಆಕಾರ ಬಂದ ಮತ್ತು ಪಿ ಟಿ ಶೀಟ ಬಗ್ಗೆ ನಾನು ಚೌಕಾಶಿ ಮಾಡಿರುವದಿಲ್ಲ. ಸದರಿ ಆಸ್ತಿ ಅವರ ಹಿರಿಯರ ಆಸ್ತಿ ಇರುತ್ತದೆ. ಸದರಿ ಜಮೀನು ಅವರಿಗೆ ನ್ಯಾಯಾಧಿಕರಣ ಮೂಲಕ ಮಂಜೂರಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿ ಉತಾರ ನೋಡಿದ್ದೇನೆ. ಅದರಲ್ಲಿ 15 ವರ್ಷದ ವರೆಗೆ ಸದರಿ ಆಸ್ತಿಯನ್ನು ಹಸ್ತಾಂತರ ಮಾಡಬಾರದು ಎಂದು ಶರತ್ತು ಇತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲ್ಲಿ ಸದರಿ ಶರತ್ತದ ಬಗ್ಗೆ ನಮೂದು ಇದೆ ಎಂದರೆ ಇದೆ ಆದರೆ ಅ ಬಗ್ಗೆ ಗೊತ್ತಿಲ್ಲ.

5. ನಾನು ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಪ್ರತಿವಾದಿ 1 ರವರು ಸದರಿ ಆಸ್ತಿಗೆ ಸಂಬಂದಿಸಿದಂತೆ ಬೇರೆ ವ್ಯವಹಾರ ಮಾಡಿರುವ ಬಗ್ಗೆ ನಾನು ಚೌಕಾಶಿ ಮಾಡಿರುವದಿಲ್ಲ. ನಾವು 04 ಜನ ಅಣ್ಣತಮ್ಮಂದಿರು ಕೂಡಿ ಪ್ರತಿವಾದಿ ನಂ.1 ರವರ ಸರ್ವೆ ನಂಬರ 172/1 ರಲ್ಲಿರುವ ಪಾಲನ್ನು ಎತ್ತಿಹಾಕಬೇಕೆಂದು ಸುಳ್ಳು ಕರಾರು ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ1 ರವರು ನಮ್ಮ ಕರಾರು ಪತ್ರ ಪೂರ್ವದಲ್ಲಿ ಪ್ರತಿವಾದಿ ನಂ2 ರವರಿಗೆ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕರಾರು ಪತ್ರ ಬರೆದುಕೊಡುವಾಗ ಪ್ರತಿವಾದಿ ನಂ1 ರವರದು 172/2ಬ ಎಂದು ಪ್ರತ್ಯಕ ಆಸ್ತಿ ಇತ್ತು ಎಂದರೆ ಸರಿ. ಅದೇ ರೀತಿ ದುಂಡಪ್ಪ ಸಿದ್ದಪ್ಪ ಖಗ್ಗನ್ನವರ ರವರ ಹೆಸರಿನಲ್ಲಿ 172/2ಅ ರಲ್ಲಿ ಆಸ್ತಿ ಇತ್ತು ಎಂದರೆ ಸರಿ. ಅದೇ ರೀತಿ ಗ್ಯಾನಪ್ಪ ಸಿದ್ದಪ್ಪ ಖಗ್ಗನ್ನವರ ರವರ ಹೆಸರಿನಲ್ಲಿ ಸರ್ವೆ ನಂಬರ 172/2ಸಿ ಎಂದು ಉತಾರ ಇತ್ತು ಎಂದರೆ ಸರಿ. ಈ ರೀತಿ ಆಕಾರ ಬಂದ ಮತ್ತು ಪಿ ಟಿ ಶೀಟನಲ್ಲಿ ವರ್ಗಾವಣೆ ಆಗಿರಲಿಲ್ಲ ಎಂದರೆ ಆಗಿತ್ತು. ನಾನು ಆಕಾರ ಬಂದ ಮತ್ತು ಪಿ ಟಿ ಶೀಟ ಬದಲಾವಣೆ ಆಗಿರುವ

ಬಗ್ಗೆ ಚೌಕಾಶಿ ಮಾಡಿದ್ದಿರಾ ಎಂದರೆ ಬದಲಾವಣೆ ಆಗಿಲ್ಲ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದಿರಾ ಎಂದರೆ ಮಾಡಿಲ್ಲ.

6. ಪ್ರತಿವಾದಿ ನಂ1 ರವರು ಪ್ರತಿವಾದಿ ನಂ2 ರವರಿಗೆ ದಿನಾಂಕ 09-10-2010 ರಂದು ಸರ್ವೆ ನಂಬರ 172/2ಬ ರ ಬಗ್ಗೆ ಖರೀದಿ ಪತ್ರ ಬರೆದುಕೊಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಗೊತ್ತಿಲ್ಲ. ಸದರಿ ವ್ಯವಹಾರ 6,48,000/- ರೂ ಆಗಿತ್ತು ಎಂದರೆ ಸರಿಯಲ್ಲ. ಈಗ ಖರೀದಿ ಮಾಡಬೇಕಾದರೆ 11 ಇ ನಕ್ಷೆ ಗೆ ಅರ್ಜಿ ಕೊಟ್ಟು ನಕಾಶೆ ಮಾಡಿಕೊಳ್ಳುಬೆಕೆಂದರೆ ಸರಿ. ಪ್ರತಿವಾದಿ 1 ರವರು ನಕಾಶೆಯನ್ನು ತಯಾರು ಮಾಡಿಕೊಂಡಿಲ್ಲ ಆ ಕಾರಣ ಪ್ರತಿವಾದಿ 2 ರವರು ಓ ಎಸ್ ನಂಬರ 160/2014 ರಂತೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 1 ರವರು ನ್ಯಾಯಾಲಯದ ಮುಂದೆ ಉಳಿದ ಪ್ರತಿಫಲ ಮೊತ್ತವನ್ನು ಪಡೆದುಕೊಂಡು ಕ್ರಯ ಪತ್ರ ಬರೆದುಕೊಡುತ್ತೇನೆಂದು ನ್ಯಾಯಾಲಯದ ಮುಂದೆ ಒಪ್ಪಿ ಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಸಾತ ಡಿಕ್ರಿ ಬಗ್ಗೆ ನನಗೆ ಮಾಹಿತಿ ಇಲ್ಲ. ಅದರಂತೆ ಪ್ರತಿವಾದಿ ನಂ.1 ರವರು ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದು ಪ್ರತಿವಾದಿ ನಂ2 ರವರು EP 6/2016 ನ್ನು ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಮುಂದುವರೆದು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು ಸದರಿ EP ಯಲ್ಲಿ 3 ನೇ ಪಕ್ಷಗಾರನಾಗಿ ಅರ್ಜಿ ಸಲ್ಲಿಸಿ ಹಾಜರಾಗಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆ ಮಾಡಿದ ನಂತರ ನಾನು ಮತ್ತು ನನ್ನ ಸಹೋದರರು ಕೂಡಿ ಪ್ರತಿವಾದಿ 2 ರವರ ಕಬ್ಜಾವಹಿವಾಟಕ್ಕೆ ತಕರಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ1 ರವರು ಕಬ್ಜಾ ಇರುತ್ತಾರೆ.

7. ನಂತರ ಮಕಬೂಲ ರವರು ಅರ್ಜಿ ಹಾಕಿ ಪಕ್ಷಗಾರನಾಗಿರುತ್ತಾರೆ ಎಂದರೆ ಸರಿ. ಆ ಅರ್ಜಿಯನ್ನು ನಾನು ಉಚ್ಚ ನ್ಯಾಯಾಲಯದಲ್ಲಿ ಅಹ್ವಾನಿಸಿದ್ದು ಅದು ವಜಾ ಗೊಂಡಿರುತ್ತದೆ ಎಂದರೆ ಸರಿ. ಪ್ರತಿವಾದಿ 2 ರವರು ಪ್ರಸ್ತುತ ಪ್ರಕರಣದಲ್ಲಿ ತಕರಾರು ಹಾಕಿರುತ್ತಾರೆ ಎಂದರೆ ಸರಿ. ಅವರ ತಕರಾರದ ಅಂಶಗಳ ಬಗ್ಗೆ ಮಾಹಿತಿ ಇದೆ. ಡಿಕ್ರಿಯಂತೆ ಪ್ರತಿವಾದಿ 2 ರವರ ಕಬ್ಜಾ ವಹಿವಾಟದಲ್ಲಿ ಇದ್ದು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅಪಸಾತ ಡಿಕ್ರಿಯನ್ನು ನಾನು ಉಚ್ಚ ನ್ಯಾಯಾಲಯದಲ್ಲಿ ಅಥವಾ ಮೇಲಿನ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ದಾಖಲ ಮಾಡಿಲ್ಲ. ಪ್ರತಿವಾದಿ ನಂ2 ರವರು ಡಿಕ್ರಿಯಂತೆ ಕಬ್ಜಾದಲ್ಲಿ ಬಂದಿಲ್ಲ ಪ್ರತಿವಾದಿ ನಂ1 ರವರು ಕಬ್ಜ ವಾಹಿವಾಟದಲ್ಲಿ ಇದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಿನ್ ಕಬ್ಜಾ ಖರೀದಿ ಕರಾರು ಪತ್ರ ದಂತೆ ದಾವೆ ದಾಖಲ ಮಾಡಿರುತ್ತೇನೆ. ಪ್ರತಿವಾದಿ ನಂ1 ರವರು ಮಾಲಕರು ಇರುತ್ತಾರೆ ಎಂದು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.)

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.